ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್.

ರಿಜಿಸ್ಟರ್ಡ್ ನಂ: ಕೆಆರ್ ಎಸ್.ಎಮ್ -19

5ನೇ ವರ್ಷ 17ನೇ ಸಂಚಿಕೆ ಕೊಪ್ಪ 4-1-1987 ಭಾನುವಾರ ಬೆಲೆ 30 ಪೈಸೆ

ಶೃಂಗೇರಿ ಕ್ಷೇತ್ರದಲ್ಲಿ ಜನತಾಕ್ಕೆ ಹೀನಾಯ ಸೋಲು :

ಕಾಂಗ್ರೆಸ್‌ಗೆ ನಿಚ್ಚಳ ಬಹುಮತ; ಜನತಾಕ್ಕೆ ಒಂದೇ ಸ್ಥಾನ

ಕೊಪ್ಪ : ಶೃಂಗೇರಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಆರು ಜಿಲ್ಲಾ ಪರಿಷತ್ ಕ್ಷೇತ್ರಗಳ ಪೈಕಿ ಐದನ್ನು ಗೆಲ್ಲುವ ಮೂಲಕ, ಪ್ರತಿಷ್ಠೆಯ ಹೋರಾಟದಲ್ಲಿ ಕಾಂಗ್ರೆಸ್ ಪಕ್ಷವು ಜನತಾ ಪಕ್ಷವನ್ನು ಅನಾಯಾಸವಾಗಿ ಮಣ್ಣು ಮುಕ್ಕಿಸಿದೆ.

ನ. ರಾ. ಪುರ ಕಸಬಾ ಕ್ಷೇತ್ರದಲ್ಲಿ ಮಾತ್ರ, ಜನತಾದ (ಕ್ಷೇತ್ರದ) ನಂ. 2 ರಾಜಕಾರಣಿ ಎನಿಸಿರುವ ಮೂಗ ಚಂದ್ರಶೇಖರ್ ಕೇವಲ 652 ಮತಗಳಿಂದ ಅತಿ ಪ್ರಯಾಸದ ಗೆಲುವು ಪಡೆದು ಜನತಾದ ಪಾಲಿಗೆ ಪಿ. ಟಿ. ಉಷಾ ಆಗಿದ್ದಾರೆ.

ಇಲ್ಲಿ ಕಾಂಗ್ರೆಸ್ಸಿನ ಟಿ. ವಿ. ವರ್ಗೀಸ್ (ರಾಜು) 5416 ಮತ ಗಳಿಸಿದರೆ, ಪಿಪಿಐನ ಜೇವಿಯರ್ 696 ಮತಗಳನ್ನು ಮಾತ್ರ ಗಳಿಸಿದರು.

ಗೆದ್ದ ಕಾಂಗ್ರೆಸ್ ಅಭ್ಯರ್ಥಿಗಳು

ಬಾಳೆಹೊನ್ನೂರಿನಲ್ಲಿ ಬಿ. ಸಿ. ಗೀತಾ ಕೊಳಲೆಯ ಶಾರದಮ್ಮ ಅವರನ್ನು 1486 ಮತಗಳಿಂದ, ಕೊಪ್ಪದಲ್ಲಿ ಬಿ. ಜಿ. ಚಿದಂಬರ್ ಕಾಡಪ್ಪ ಗೌಡರನ್ನು 1537 ಮತಗಳ ಅಂತರದಿಂದ, ಹರಿಹರಪುರದಲ್ಲಿ ಸಾವಿತ್ರಮ್ಮ ಜಯಲಕ್ಷ್ಮಿಯವರನ್ನು 1672 ಮತಗಳಿಂದ, ಜಯಪುರದಲ್ಲಿ ಎಚ್. ಎಂ. ಮಾಸ್ತಿ ಶೇಖರ ಅವರನ್ನು 1482 ಮತಗಳಿಂದ, ಶೃಂಗೇರಿಯಲ್ಲಿ ಕೆ. ವಿ. ರಾಮಪ್ಪಯ್ಯ ಕೆ. ಎಂ. ಶ್ರೀನಿವಾಸರನ್ನು 1665 ಮತಗಳಿಂದ ಸೋಲಿಸಿ ಗೆದ್ದಿದ್ದಾರೆ. ಕ್ಷೇತ್ರದಲ್ಲಿ ಈ ಪ್ರಮಾಣದ ಅಂತರವನ್ನಾಗಲಿ, 5 ಸ್ಥಾನಗಳನ್ನು ಗೆಲ್ಲುವುದನ್ನಾಗಲಿ ಬಹುಶಃ ಕಾಂಗ್ರೆಸ್‌ನವರೇ ನಿರೀಕ್ಷಿಸಿರಲಿಲ್ಲ ಎನ್ನಬಹುದು.

ವಿಜಯೋತ್ಸವ-ಕೃತಜ್ಞತೆ

ಕೊಪ್ಪದಲ್ಲಿ ಬೆಳಿಗ್ಗೆ 8ಕ್ಕೆ ಆರಂಭವಾದ ಮತಗಳ ಎಣಿಕೆ ಮಧ್ಯಾಹ್ನ 1 ಗಂಟೆಯೊಳಗೆ ಮುಗಿಯಿತು. ಅದಕ್ಕೆ ಸುಮಾರು 11 ಗಂಟೆಯೊಳಗೇ ಎಲ್ಲ ಕ್ಷೇತ್ರಗಳ ವಿಜಯದ ಸುಳಿವು ಸಿಕ್ಕಿದ ಕಾಂಗ್ರೆಸ್ ಬೆಂಬಲಿಗರು ಜೈಕಾರ ಶುರು ಮಾಡಿದ್ದರು. ಫಲಿತಾಂಶ ಘೋಷಣೆಯಾದೊಡನೆ, ಗೆದ್ದ ಅಭ್ಯರ್ಥಿಗಳನ್ನು ತೆರೆದ ಜೀಪಿನಲ್ಲಿ ಪೇಟೆಯಲ್ಲಿ ಮೆರವಣಿಗೆ ಮಾಡಿದರು. ಅನಂತರ ಬಸ್ ಸ್ಟ್ಯಾಂಡ್ ಬಳಿ ಪಕ್ಷದ ಕಚೇರಿ ಎದುರು ಸಭೆ ನಡೆಸಿ, ಗೆದ್ದ ಅಭ್ಯರ್ಥಿಗಳು, ಬ್ಲಾಕ್ ಅಧ್ಯಕ್ಷ ವಿಜಯ ಅಜಿತ್, ಯು. ಕೆ. ಶಾಮಣ್ಣ ಮಾತನಾಡಿ ಮತದಾರರಿಗೆ ಕೃತಜ್ಞತೆ ಸಲ್ಲಿಸಿದರು.

ಈ ಬಾರಿ ಈ ಕ್ಷೇತ್ರದಲ್ಲಷ್ಟೇ ಅಲ್ಲ. ಇಡೀ ಜಿಲ್ಲೆಯಲ್ಲೇ ಕಾಂಗ್ರೆಸ್ ಜನತಾವನ್ನು ಸೋಲಿಸಿ 14 ಸ್ಥಾನ ಗಳಿಸಿದೆ. ಜನತಾಕ್ಕೆ 11 ಮತ್ತು ಪಕ್ಷೇತರರಿಗೆ 1 ಸ್ಥಾನ ಲಭಿಸಿದೆ. ಆದಾಗ್ಯೂ ಜನತಾ ವಿಧಾನಸಭೆ, ವಿಧಾನ ಪರಿಷತ್ ಮತ್ತು ರಾಜ್ಯಸಭೆಗಳಲ್ಲಿನ ತನ್ನ ಸದಸ್ಯರ ಸಂಖ್ಯಾ ಬಲದಿಂದಾಗಿ ಜಿಲ್ಲಾ ಪರಿಷತ್ತಿನ ಮೇಲೆ ತನ್ನ ಹಿಡಿತ ಸಾಧಿಸುವಲ್ಲಿ ಯಶಸ್ವಿಯಾಗಿದೆ.

ಸಂಕದಿಂದ ಬಿದ್ದು ಮರಣ

ಶೃಂಗೇರಿ: ಸಮೀಪದ ಕಲ್ಕಳ ಬಳಿ ಕೊಚ್ಚವಳ್ಳಿ ಹಾಲಪ್ಪ ಗೌಡ ಎಂಬ 42 ವರ್ಷದ ರೈತ ರಾತ್ರಿ ಪೇಟೆಯಿಂದ ಸಾಮಾನಿನ ಚೀಲ ತಲೆಯ ಮೇಲೆ ಹೊತ್ತುಕೊಂಡು ಸಂಕವೊಂದನ್ನು ದಾಟುತ್ತಿದ್ದಾಗ ಕೆಳಗಿನ ಕಂದಕಕ್ಕೆ ಬಿದ್ದು ಮೃತಪಟ್ಟಿದ್ದಾರೆ. ಸ್ಥಳೀಯ ಜಮೀನಿನವರ ಸಂಕುಚಿತ ಮನೋಭಾವದಿಂದಾಗಿ ಸರಿಯಾದ ದಾರಿ ಮಾಡಲಾಗದೆ ಇವರ ಬಲಿಯಾಯಿತೆಂದು ತಿಳಿದು ಬಂದಿದೆ.

ಸಣ್ಣ ಕೃಷಿಕರಾಗಿದ್ದ ಇವರು ಕೂಲಿಯನ್ನೇ ನಂಬಿ ತಮ್ಮ ಸಂಸಾರವನ್ನು ಜೊತೆಯಾಗಿಟ್ಟುಕೊಂಡಿದ್ದರು. ಇವರು ಬಿಟ್ಟು ಹೋಗಿರುವ ಪತ್ನಿ, 2 ಗಂಡು, 2 ಹೆಣ್ಣು ಮಕ್ಕಳಿಗೆ "ಆಶಾಕಿರಣ" ಯೋಜನೆಯಲ್ಲಾದರೂ ನೆರವು/ಪರಿಹಾರ ದೊರೆಯಬೇಕಾಗಿದೆ.

ಶಂಕರ್ ಕಾರ್ಮಿಕರ ನ್ಯಾಯಯುತ ಬೇಡಿಕೆಗಳ ಈಡೇರಿಸಲು ಎಂ. ಎಸ್. ಕೃಷ್ಣ ಆಗ್ರಹ

ಕೊಪ್ಪ: ಇಲ್ಲಿನ ಶಂಕರ್ ಕಂಪೆನಿ ಮಾಲೀಕರು ತಮ್ಮ ಸಂಸ್ಥೆಯ ಕಾರ್ಮಿಕರ ನ್ಯಾಯಯುತವಾದ, ಹಾಗೂ ಕಾನೂನು ಬದ್ಧವಾದ ಬೇಡಿಕೆಗಳನ್ನು ಈಡೇರಿಸದೆ ಅತಿ ಕನಿಷ್ಠ ಮಟ್ಟದಲ್ಲಿ ಅವರಿಗೆ ಸಂಬಳ-ಭತ್ಯೆ ಇತ್ಯಾದಿಗಳನ್ನು ನೀಡುತ್ತಿದ್ದಾರೆ. ರಜಾ, ಓವರ್ ಟೈಂ, ದಿನದ ಕೆಲಸಕ್ಕೊಂದು ಮಿತಿ ಅಥವಾ ನಿಗದಿತ ಅವಧಿ ಮತ್ತಿತರ ಸೇವಾ ನಿಯಮಗಳು ಇಲ್ಲ. ಸಮವಸ್ತ್ರವನ್ನು ಪ್ರತಿ ವರ್ಷ ಕೊಡುತ್ತಿಲ್ಲ. ಇವೇ ಮುಂತಾದ ಹಲವು ಬಗೆಯಲ್ಲಿ ಕಾರ್ಮಿಕ ಕಾಯಿದೆಗಳನ್ನು ಉಲ್ಲಂಘಿಸಿ, ಕಾರ್ಮಿಕರ ಮೇಲೆ ದಬ್ಬಾಳಿಕೆ ನಡೆಸುತ್ತ ಅವರ ಸಂಘಟನೆಯ ಹಕ್ಕುಗಳನ್ನು ಸಹ ಹತ್ತಿಕ್ಕುತ್ತ ಕ್ರೂರ ರೀತಿಯಲ್ಲಿ ಶೋಷಣೆ ನಡೆಸುತ್ತಿರುವುದನ್ನು ಕೈ ಬಿಟ್ಟು ನ್ಯಾಯಯುತವಾಗಿ ವರ್ತಿಸಬೇಕೆಂದು ರಾಜ್ಯದ ಪ್ರಮುಖ ಕಾರ್ಮಿಕ ಮುಖಂಡ ಹಾಗೂ ಪಿಪಿಐ ಶಾಸಕ ಎಂ. ಎಸ್. ಕೃಷ್ಣನ್ ಇಲ್ಲಿ ಡಿ. 28ರಂದು ಒತ್ತಾಯಿಸಿದರು.

"ಪ್ರತಿಯೊಂದು ಬಸ್ಸಿಗೆ 7.5 ಜನರಂತೆ (2 ಬಸ್ಸಿಗೆ 15 ಜನ) ಸಿಬ್ಬಂದಿ ನೇಮಿಸಬೇಕೆಂಬ ಕಾನೂನು ಇದೆ. ಆದರೆ ಇಲ್ಲಿ ತಲಾ ನಾಲ್ಕು ಮಂದಿ ಸಹ ಇಲ್ಲವೆಂದು ತಿಳಿದು ಬಂದಿದೆ. ಇಂದಿನ ಬಸ್ ಕಾರ್ಮಿಕನಿಗೆ ದಿನಕ್ಕೆ ಹೆಚ್ಚು-ಕಮ್ಮಿ ಇಪ್ಪತ್ತು ಕೆಲಸ!" ಎಂದ ಅವರು, ನೇಮಕಾತಿ ಕಾನೂನು ಅನ್ವಯಿಸಿದರೆ ಇದೇ ಕಂಪೆನಿಯಲ್ಲಿ ಇನ್ನೂ 200-300 ಜನಕ್ಕೆ ಉದ್ಯೋಗ ದೊರೆತು, ಈ ಊರಿನ ನಿರುದ್ಯೋಗ ಸಮಸ್ಯೆ ಪೂರ್ಣವಾಗಿ ನೀಗಬಹುದು ಎಂದರು.

"ಕಾರ್ಮಿಕರಿಗೆ ಚಳುವಳಿ ಆಟವಲ್ಲ, ಅನಿವಾರ್ಯವಾದಾಗ ಮಾತ್ರ. ಆದರೆ ಈ ಸಂಸ್ಥೆ ಕಾರ್ಮಿಕರನ್ನು ಚಳುವಳಿಯ ಮಾರ್ಗಕ್ಕೆ ತಳ್ಳುವ ಮೂಲಕ ಇಡೀ ಈ ಮಲೆನಾಡು ಪ್ರದೇಶದ ಜನತೆಯನ್ನು ಸಂಕಷ್ಟಕ್ಕೆ ತಳ್ಳುತ್ತಿದೆ." ಎಂದು ಆಪಾದಿಸಿದ ಬಿ. ಕೆ. ಸುಂದರೇಶ್, ಕಾರ್ಮಿಕರಿಗೆ ಇಂಥ ಅನಿವಾರ್ಯತೆ ಬಂದಲ್ಲಿ ಜನತೆ ಸಹಾನುಭೂತಿಯಿಂದ ಸಹಕರಿಸುವುದಲ್ಲದೆ, ಕಾರ್ಮಿಕರನ್ನು ಮನುಷ್ಯರಂತೆ ನಡೆಸಿಕೊಳ್ಳಲು ಮಾಲೀಕರನ್ನು ಒತ್ತಾಯಿಸಬೇಕು ಎಂದು ಮನವಿ ಮಾಡಿದರು.

ಅಭ್ಯರ್ಥಿಗಳಿಗೆ ಮತದಾರರ ಹಿತನುಡಿಯ ಓಟುಗಳು !

ಕೊಪ್ಪ : ಓಟು ಮಾಡುವಾಗ ಕೆಲವು ಮತದಾರರು ಮತ ಚೀಟಿಗಳ ಜೊತೆಗೆ ಅಭ್ಯರ್ಥಿಗಳಿಗೆ ತಮ್ಮ ಕೆಲ 'ಹಿತ ನುಡಿ'ಗಳನ್ನೂ ಸಹ ಚುಚ್ಚಿ (ಪಿನ್ ಮಾಡಿ) ಚಲಾಯಿಸಿದ ಕೆಲವು ಪ್ರಕರಣಗಳು ಕಂಡುಬಂದವು. ಅವುಗಳ ಒಂದೆರಡು ಸ್ಯಾಂಪಲ್ ಇಲ್ಲಿದೆ.

ಹಿರೇಕೊಡಿಗೆಯ ಒಬ್ಬರು ಮತದಾರರು: ಜಾತೀಯತೆ ಅಳಿಯಲಿ. ಪ್ರಜಾಪ್ರಭುತ್ವ ಉಳಿಯಲಿ. ಒಕ್ಕಲಿಗರಲ್ಲದೆ ಬೇರೆ ಅಭ್ಯರ್ಥಿಗಳಿಲ್ಲವೆ? ಎಲ್ಲಾ ಕ್ಷೇತ್ರಗಳಲ್ಲಿ ಒಕ್ಕಲಿಗರ ಪ್ರಾಬಲ್ಯ.... (ಇಲ್ಲಿ ಅವರ 'ಇನಿಶಿಯಲ್ಸ್' ಇದೆ) ಜಯಪ್ರಕಾಶ್ ನಾರಾಯಣ ಕೀ ಜೈ! (ಮತವನ್ನು ತಾವೇ ಕುಲಗೆಡಿಸಿದ್ದಾರೆ!)

ಅಲ್ಲಿನವರೇ ಇನ್ನೊಬ್ಬರು :— ಡಂಭಾಚಾರಕ್ಕೆ ರಾಜಕೀಯ ಮಾಡಬೇಡಿ. ನಿಷ್ಪಕ್ಷಪಾತವಾಗಿ ಕೆಲಸ ಮಾಡಿ. ನಾಟಕೀಯ ರಾಜಕೀಯದಲ್ಲಿ ಮುಂದಾದರೂ ಸೋಲುಂಟಾಗದಿರಲಿ. (ಇವರ ಮತ ಜನತಾದ ಜಯಲಕ್ಷ್ಮಿಯವರಿಗೆ.)

ಬೊಮ್ಲಾಪುರದವರೊಬ್ಬರು:— ನೀವೂ ನಮ್ಮ ಮಾಜಿ ಮಂತ್ರಿ, ಹಾಲಿ ಶಾಸಕ ಗೋವಿಂದಗೌಡರಂತೆ ಜಾತೀವಾದಿಯಾಗದೆ ನಮ್ಮ 'ಮತ'ದ ಮೌಲ್ಯ ಉಳಿಸುವಿರಾಗಿ ಆಶಿಸೋಣ—voters. (ಇವರ ಮತ ಯಾರಿಗೆಂದು ಗೊತ್ತಾಗಿಲ್ಲ. ಬಹುಶಃ ಜಯಲಕ್ಷ್ಮಿಯವರಿಗೆ ಇರಬಹುದು.)

'ಮತ' ಎಂದರೆ ಅಭಿಪ್ರಾಯ ಎಂಬರ್ಥದಲ್ಲಿ ಇಲ್ಲಿ ಮತಕ್ಕೆ ಬೆಲೆಯಿಲ್ಲದಾಗಲೂ ಇವರುಗಳು ಚಲಾಯಿಸಿರುವ ಈ ಮತಗಳ ಬಗ್ಗೆಯೂ ಉಮೇದುವಾರರು, ವಿಜಯಿಗಳು ಗಮನಕೊಡಬಾರದೆಂದಿಲ್ಲ ಅಲ್ಲವೆ?

ನನ್ನ ಆತ್ಮೀಯ ಮತ್ತು ವಿಚಾರವಂತರಾದ ಕೆಲವರು ರಾಜಕೀಯವೆಂಬ ಚಟಕ್ಕೆ ಬಲಿಯಾಗಿ ಅದರ ಅಮಲಿನಲ್ಲಿರುವುದು ನನಗೆ ತುಂಬಾ ಖೇದವನ್ನುಂಟುಮಾಡಿದೆ ಮತ್ತು ನಾಚಿ ತಲೆ ಬಾಗುವಂತೆ ಮಾಡಿದೆ.

ಅವರೆಲ್ಲರಿಗೆ ಶುಭ ಕೋರುವುದೊಂದಲ್ಲದೆ ಬೇರೇನೂ ಮಾಡಲಾರದು ನು ವಿಷಾದಕರ ಸಂಗತಿ.

ಹೊಸ ವರ್ಷದ ಶುಭಾಶಯಗಳೊಂದಿಗೆ,

ಹರೀಶ ಜೋಶಿ,

(ರಾಜಕಾರಣವನ್ನು ನೂತನಾಡಬಯಸದ ರಾಷ್ಟ್ರಪ್ರೇಮಿ)

1-1-1987

ಆರೂ ಕ್ಷೇತ್ರಗಳಲ್ಲಿ ವಿವಿಧ ಅಭ್ಯರ್ಥಿಗಳು ಗಳಿಸಿದ ಮತಗಳ ಮತಗಟ್ಟೆವಾರು ವಿವರ

ನರಸಿಂಹರಾಜಪುರ

	ಜನತಾ	ಕಾಂಗ್ರೆ	ಸಿಪಿಐ
...ಾಪುರ	134	137	8
...ಣಬೂರು	88	110	3
...ಲೋನಿ	250	182	4
...ತ್ತಿನಕೊಪ್ಪ-ಎ	141	295	3
-ಬಿ	373	149	4
...ೀಣಕೆರೆ	358	138	7
...ಡಬೂರು -ಎ	280	160	10
-ಬಿ	113	122	11
ಶೆಟ್ಟಿಕೊಪ್ಪ-1	263	342	13
ಶೆಟ್ಟಿಕೊಪ್ಪ-2	178	80	8
ಸೂಸಲವಾನಿ	266	393	19
ದ್ವಾರಮಕ್ಕಿ	195	260	20
ಸಿಂಸೆ ಕಳ್ಳಿಕೊಪ್ಪ	153	221	71
ಕ್ಯಾಂಪ್ ಮೊಹಲ್ಲ	222	457	26
ಎನ್.ಆರ್. ಪುರ-1	176	360	14
-2	278	206	13
-3	280	200	7
-4	283	159	18
ಎನ್.ಆರ್.ಪುರ -5	194	400	6
ನಾಗಲಾಪುರ	340	292	124
ಗುಬ್ಬಿಗ	279	183	26
ಈಚಿಕೆರೆ	157	99	115
ಲಾಲ್‌ಬಾಗ್ ಎಸ್ಟೇಟ್	99	85	50
ನಂದಿಗಾವೆ	94	66	3
ಹೊನ್ನೆಕುಡಿಗೆ	183	64	7
ಮೂಡುಬಾಗಿಲು	268	85	68
ವರ್ಕಾಟೆ	317	222	37
ಒಟ್ಟು	6068	5416	696

ಕೊಪ್ಪ

	ಜನತಾ	ಕಾಂಗ್ರೆ	ಸಿಪಿಐ	ಸ್ವತಂತ್ರ
...ಪ್ಪಗ್ರಾ.-1	107	319	9	4
-2	187	311	16	2
-3	138	440	12	2
...ಪ್ಪಟೌನ್ 1	115	241	13	4
2	126	258	14	1
3	219	201	11	3
4	175	132	6	2
5	185	205	15	3
6	142	161	9	3
ಕುದುರೆಗುಂಡಿ	186	524	17	11
ರಾಘವೇಂದ್ರ ನಗರ	39	74	11	0
ಬಾಳಗಡಿ	250	340	25	2
ಬಪ್ಪುಂಜಿ-1	87	334	70	6
-2	129	188	20	3
ಹೆಗಡೆಕೊಪ್ಪ	185	369	28	4
ಹೊಸೂರು	31	82	17	1
ಉಪ್ಪಿನಗದ್ದೆ	184	84	4	2
ಕಾಚಕಲ್	170	355	18	7
ನಾರ್ವೆ-1	572	105	8	5
ಅಂದಗಾರು	183	120	4	4
ತನೂಡಿ	142	154	3	1
ನಾರ್ವೆ-2	280	107	5	3
ಉತ್ತಮೇಶ್ವರ	161	326	13	13
ಕೆಂಗಿನಮನೆ	250	221	9	6
ಮಾಚಿಕೊಪ್ಪ	134	144	6	3
ಬೆಳರಿನಕೊಡಿಗೆ	97	274	4	2
ಲೋಕನಾಥಪುರ	242	128	3	2
ಹೆದ್ಸೆ-1	125	164	6	4
-2	53	103	1	2
ದಯಂಬಳ್ಳಿ	235	202	2	4
ಒಟ್ಟು	5129	6666	379	109

ಹರಿಹರಪುರ

	ಜನತಾ	ಕಾಂಗ್ರೆ
...ರಕರಡಿ	53	56
...ಂಡಿಗಡಿ	220	376
...ಮ್ಮರ್ಡಿ 1	330	278
2	173	148
3	37	69
...ಕಾಲ್ಮುತ್ತೂರು	228	339
...ಲುವಾಗಿಲು	198	361
ಹೊಸೂರು	178	287
ಶಾನುವಳ್ಳಿ	40	169
ಹೆಗ್ಗಾರು	141	224
ಮೇಲುಕೊಪ್ಪ	83	65
ಹೊನಗಾರು	74	184
ಬಿಲಗದ್ದೆ-1	153	171
-2	102	125
ಹೊನಗೋಡು	251	251
ಮೇಲುಬಿಳ್ರೆ	228	177
ಕೊಡೂರು	171	276
ಕೋಟೆ	114	150
ಬೋಳಾಪುರ	110	149
ಹಿರೇಕೊಡಿಗೆ	90	124
ಆಲೆಮನೆ	143	162
ಸೂರ್ಯದೇವಸ್ಥಾನ	149	224
ಗುಣವಂತೆ	281	176
ಅದ್ದಡ	167	382
ಅಮ್ಮಡಿ ಎಸ್ಟೇಟ್	7	34
ಸಿದ್ಧರಮಠ	170	290
ಕೆಸವೆ	174	212
ತಮ್ಮಡವಳ್ಳಿ	144	182
ಹರಿಹರಪುರ -1	143	236
-2	215	308
ದೇವರಮನೆ	89	150
ಬೊಮ್ಲಾಪುರ -1	197	158
-2	197	201
ಒಟ್ಟು	5044	6716

ಜಯಪುರ

	ಜನತಾ	ಕಾಂಗ್ರೆ
...ೀಗೂರು	98	60
...ರಳಾನೆ	116	125
...ಗ್ಗಾರುಕೊಡಿಗೆ	150	180
...ಗಳಗಂಡಿ-1	41	49
...ಗಳಗಂಡಿ-2	110	152
...ಹುಲಿಗರಡಿ	63	65
...ಕೂಳೂರು	237	251
ಜಯಪುರ 1	231	182
2	150	87
3	95	155
4	88	73
5	87	138
ಗುಡ್ಡೇತೋಟ	149	424
ಮೂರ್ಕಗದ್ದೆ	108	375
ಎಲೆಮಡಲು	56	231
ಹಿರೇಗದ್ದೆ 1	107	95
ಹಿರೇಗದ್ದೆ 2	116	294
ಕುಂದೂರು	168	286
ತಲವಾನೆ	32	80
ಸಿಆರ್‌ಎಸ್-ಬಲ	56	113
" ಎಡ	57	61
ಅಡಿಗೆಬೈಲು	174	285
ಸೀಗೋಡು	238	199
ಹೇರೂರು	250	293
ಬೈರೇದೇವರು	103	90
ಶಾಂತಿಗ್ರಾಮ	262	279
ಚಿತ್ರದಕೊಳಲು	127	176
ಬಸರಿಕಟ್ಟೆ ಎಡ	69	182
" ಬಲ	145	136
ಸಿ ರೂರು	48	164
...ನಹಳ್ಳಿ	75	264
ಬಿಳಾಲುಕೊಪ್ಪ	180	215
ಕಲ್ಲುಗುಡ್ಡೆ	302	128
ಅಂಚೆ ಮತಗಳು	10	7
ಒಟ್ಟು	4462	5844

ಶೃಂಗೇರಿ

	ಜನತಾ	ಕಾಂಗ್ರೆ
ಕಿಗ	೨೭೪	೪೩೪
ಕೆ. ಮಸಿಗೆ	೨೫	೧೨೧
ವಿಾಗ	೧೫೨	೧೬೯
ನಲ್ಲೂರು	೧೭೦	೩೩೧
ಆಸನ್ ಬಾಳು	೮೪	೮೮
ದೇವಾಲಿಕೊಪ್ಪ	೧೮೧	೧೫೭
ಬೀಗಾರು	೭೭	೨೦೧
ಹುಲಿಮನೆ	೨೮೫	೧೨೯
ಯಡದಾಳು	೨೪೩	೨೦೧
ಹೊಳೆಕೊಪ್ಪ	೧೫೩	೨೦೭
ಗಂಡಗಟ್ಟ	೨೮೩	೪೧೬
ಮೇಲಿನಕೊಪ್ಪ	೨೩೦	೧೭೧
ಆನೆಗುಂದ	೧೩೦	೨೪೪
ಸಿಂದೋಡಿ	೩೨೪	೨೫೯
ಹೈಸ್ಕೂಲ್ (ಗಿಣಿಗಿಣಿ)	೧೭೩	೩೨೯
ಅಡ್ಡಗದ್ದೆ	೧೬೧	೨೨೭
ಹೈಸ್ಕೂಲ್ (ಬಲ)	೬೮	೧೯೩
ಉಳುವೆ	೯೩	೩೦೩
ಹೊನ್ನವಳ್ಳಿ (ಎಡ)	೧೦೨	೯೪
ತ್ಯಾವಣ	೯೬	೧೪೨
ಹೊನ್ನವಳ್ಳಿ (ಬಲ)	೧೧೨	೮೧
ಮಸಿಗೆ	೧೪೮	೨೭೮
ಶೃಂಗೇರಿ-೧	೨೬೯	೩೦೬
-೨	೨೪೮	೨೬೨
-೩	೨೬೩	೩೬೬
ಮೆಣಸೆ	೧೨೨	೪೦೨
ವಿದ್ಯಾರಣ್ಯಪುರ	೨೫೫	೨೩೦
ಮಸಿಗೆ (ಎಡ)	೪೨	೧೨೬
ಕೆಕ್ಕೂರು (ಎಡ)	೧೪೨	೧೧೬
ವೈಕುಂಠಪುರ (ಬಲ)	೧೨೧	೧೩೫
ಕುಂಚೆಬೈಲು	೨೩೮	೧೭೮
ಕೆಕ್ಕೂರು (ಬಲ)	೨೫೩	೪೪೧
ನರಾಳಿ	೩೪೩	೨೩೬
ಗೋಣಿಬೀಳಲು	೧೩೪	೨೧೩
ವೈಕುಂಠಪುರ	೩೭	೮೩
ಸುಂಕದಮಕ್ಕಿ	೧೩೯	೬೪
ಮಲೆನಾಡು	೧೨೪	೧೪೬
ಕೆಗಿಕಟ್ಟೆ	೨೯೬	೧೮೨
ಕಡಕಲ್	೧೮೫	೯೨
ಹರೂರು	೧೧೫	೧೭೭
ನೆಮ್ಮಾರು	೨೯೨	೧೫೬
ಒಟ್ಟು	7149	8814

ಬಾಳೆಹೊನ್ನೂರು

	ಜನತಾ	ಕಾಂಗ್ರೆ
ಹೆಸ್ಸಂಗಿ	89	22
ಅಳಿಹಳ್ಳಿ	161	26
ವಗ್ಗಡೆ	165	68
ಅರಳಿಕೋಟೆ	220	198
ಮಲ್ಲಂದೂರು	112	99
ಹಾತೂರು	131	163
ಬಿಮ್ಮನೆ	145	262
ಸೀತೂರು	360	416
ಸಂಕ್ಸೆ	195	163
ಕಾನೂರು	248	267
ಹರಾವರಿ ಎ	149	205
ಬಿ	93	187
ದಾವಣ	106	133
ಮೇಲ್ಪಾಲು	190	400
ಕರ್ಕೇಶ್ವರ	123	291
ಗಡಿಗೇಶ್ವರ ಆಡುವಳ್ಳಿ	313	347
ಕೊಳಲೆ	210	243
ಮೇಗರಮಕ್ಕಿ	104	172
ಮುದುಗುಣಿ	107	112
ಬಾಳೆಗದ್ದೆ	53	11
ಬಾಳೆಹೊನ್ನೂರು 1 (ಬಿ. ಕಣಬೂರು)	74	265
2	115	189
3	91	156
4	248	476
5	286	365
6	294	349
7	162	155
ಬನ್ನೂರು	277	250
ಜಕ್ಕಣಿಕೆ	125	144
ಹಲಸೂರು	236	236
ಮಾಗುಂಡಿ 1	161	373
2	89	175
ಒಟ್ಟು	5435	6921

(ಈ ಅಂಕಿ-ಅಂಶಗಳನ್ನು ಎಣಿಕೆಯ ತರಾತುರಿ-ಗೊಂದಲಗಳ ಮಧ್ಯೆ ಪಡೆದುದಾದರೂ ತಪ್ಪುಗಳ ಬಗ್ಗೆ ಆದಷ್ಟೂ ಎಚ್ಚರ ವಹಿಸಿದ್ದೇವೆ. ಆದರೂ ಗಂಭೀರವಾದ ತಪ್ಪುಗಳಾಗಿದ್ದಲ್ಲಿ ಓದುಗರು ಸೂಚಿಸಬಹುದು. ಸಣ್ಣ ಪುಟ್ಟ ವ್ಯತ್ಯಾಸಗಳಿದ್ದರೆ ಓದುಗರು ದಯವಿಟ್ಟು ತಿದ್ದಿಕೊಳ್ಳಿ. ಸಂ.)

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿರಿಮನೆ ನಾಗರಾಜ್, ಅಚ್ಚು: ದೀಪವಾಣಿಗೆ ಅಚ್ಚುಕೂಟ, ಕೊಪ್ಪ